ಕಲಘಟಗಿ ತಾಲ್ಲೂಕಿನ ರೈತರಿಗೆ ಭತ್ತದ ಬೆಳೆ ವಿಮೆ ಮಂಜೂರು ಆಗದಿರುವ ಬಗ್ಗೆ

೩೬೦ ಶ್ರೀ ಪಿ. ಸಿ. ಸಿದ್ದನಗೌಡ್ರ (ಕಲಘಟಗಿ).—ಮಾನ್ಯ ಕೃಷಿ ತೋಟಗಾರಿಕೆ, ಅರಣ್ಯ ಮತ್ತು ಲಕ್ಷೇಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭ ಹಾಗೂ ೧೯೮೭-೮೮ರಲ್ಲಿ ಕಲಘಟಗಿ ತಾಲ್ಲೂಕಿನ ರೈತರಿಗೆ ಭತ್ತದ ಬೆಳೆ ಹಾನಿಯಾಗಿದ್ದು ಈವರೆಗೂ ಬೆಳೆ ವಿಮೆ ಮಂಜೂರು ಆಗದಿರಲು ಕಾರಣಗಳೇನು?

ಆ) ಧಾರವಾಡ ಜಿಲ್ಲೆಯ ಹಾನಗಲ್ ಹಾಗೂ ಕಲಘಟಗಿ ತಾಲ್ಲೂಕುಗಳಲ್ಲಿ ವ್ಯಾಪಿಸಿರುವ ಇದ್ದು ಹಾನಗಲ್ ತಾಲ್ಲೂಕಿನಲ್ಲಿ ಮಾತ್ರ ಭತ್ತದ ಬೆಳೆ ಹಾನಿಯಾದ ರೈತರಿಗೆ ವಿಮೆ ಹಣ ಮಂಜೂರಾಗಿದ್ದು ಕಲಘಟಗಿ ತಾಲ್ಲೂಕಿನ ರೈತರಿಗೆ ಮಂಜೂರು ಆಗಲಿಲ್ಲದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕಲಘಟಗಿ ತಾಲ್ಲೂಕಿನ ರೈತರ ವಿಮಾ ಹಣವನ್ನು ಎಂದು ಮಂಜೂರು ಮಾಡಲಾಗುವುದು.

ಶ್ರೀ ಕೆ. ಎಚ್. ರಂಗನಾಥ್ (ಕೃಷಿ ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಸಚಿವರು).—

ಅ) ೧೯೮೬-೮೭ನೇ ಸಾಲಿನಲ್ಲಿ ಕಲಘಟಗಿ ತಾಲ್ಲೂಕಿನ ಭತ್ತದ ಬೆಳೆಗೆ ವಿಮೆ ಮಾಡಿಸಿದ ೨೪೮೬ ರೈತರಿಗೆ ೩೦.೭೬ ಲಕ್ಷ ರೂ.ಗಳ ನಷ್ಟ ಪರಿಹಾರವನ್ನು ಈಗಾಗಲೇ ನೀಡಲಾಗಿದೆ. ಆದರೆ, ೧೯೮೭-೮೮ನೇ ಸಾಲಿನಲ್ಲಿ ಈ ತಾಲ್ಲೂಕಿನಲ್ಲಿ ಭತ್ತದ ಬೆಳೆಯು ವಾಸ್ತವಿಕ ಸರಾಸರಿ ಇಳುವರಿಯು, ಪ್ರಾರಂಭಿಕ ಇಳುವರಿಗಿಂತ ಹೆಚ್ಚಾಗಿ ಇದ್ದ ಕಾರಣ ಈ ತಾಲ್ಲೂಕಿನ ವಿಮೆ ಮಾಡಿಸಿದ ರೈತರಿಗೆ ನಷ್ಟ ಪರಿಹಾರ ನೀಡುವ ಅವಕಾಶ ಇರುವುದಿಲ್ಲ.

ಆ) ಹೌದು ಸ್ವಾಮಿ.

ಇ) ೧೯೮೬-೮೭ರ ಮುಂಗಾರು ಹಂಗಾಮಿನಲ್ಲಿ ಹಾನಗಲ್ ತಾಲ್ಲೂಕಿನ ಭತ್ತದ ಬೆಳೆಯು ವಾಸ್ತವಿಕ ಸರಾಸರಿ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆಯಾಗಿದ್ದುದರಿಂದ, ಆ ತಾಲ್ಲೂಕಿನ ರೈತರು ನಷ್ಟ ಪರಿಹಾರವನ್ನು ಪಡೆಯಲು ಅರ್ಹರಾಗಿದ್ದರು.

ರಾಜ್ಯದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಫ್ರೀಷಿಪ್ ನೀಡಿಕೆ

೩೬೮. ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್).—ಮಾನ್ಯ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ರಾಜ್ಯದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಫ್ರೀಷಿಪ್ ಸ್ಕಾಲರ್‌ಷಿಪ್ ನೀಡಿಕೆಗೆ ಅನುಸರಿಸಲಾಗುತ್ತಿರುವ ಮಾನದಂಡಗಳೇನು ?

ಬಿ) ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್ ಪಡೆಯಲು ನಿಗದಿಮಾಡಿದ ಪೋಷಕರ ವರಮಾನವೆಷ್ಟು?

ಸಿ) ಈ ವರಮಾನದ ಮಿತಿಯನ್ನು ಹೆಚ್ಚಿಸಲಾಗುವುದೇ ?

ಡಿ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನ ಇದರ ಲಾಭವನ್ನು ಪಡೆದಿದ್ದಾರೆ (೧೯೮೯-೯೦)?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು).—

ಎ) ಫ್ರೀಷಿಪ್ ಸ್ಕಾಲರ್‌ಷಿಪ್‌ಗಳನ್ನು ನೀಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

ಫ್ರೀಷಿಪ್ :

ಅರ್ಹತೆ : ಪೋಷಕರ ವಾರ್ಷಿಕ ಆದಾಯವು ೫,೬೦೦-೦೦ ರೂಪಾಯಿಗಳಾಗಿರಬೇಕು (ಇದರಿಂದ ಎಸ್ಸಿ, ಎಸ್ಟಿ ಬಟಿಯವರಿಗೆ ಅನ್ವಯಿಸದು)